
# ಶ್ರೀರಾಮಕೃಷ್ಣ ವಚನವೇದದ ವೈಶಿಷ್ಟ್ಯ ಮತ್ತು ಆಧ್ಯಾತ್ಮಿಕ ಅನುಭೂತಿ

**ಸ್ವಾಮಿ ಮುಕ್ತಿದಾನಂದ**

‘ಶ್ರೀರಾಮಕೃಷ್ಣ ವಚನವೇದ’ವು ಆಧ್ಯಾತ್ಮಿಕ ಇತಿಹಾಸದಲ್ಲೇ ಒಂದು ಮಹತ್ವದ ಕೃತಿ. ಇದರಂತೆ ಅವತಾರಪುರುಷರೊಬ್ಬರ ಮಾತುಗಳನ್ನು ಅಧಿಕೃತವಾಗಿ ದಾಖಲಿಸಿರುವ ಕೃತಿ ಮತ್ತೊಂದಿಲ್ಲ. ಇದರ ಮಹತ್ವವನ್ನು ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ ‘ವಿವೇಕಪ್ರಭ’ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.





‘ಶ್ರೀರಾಮಕೃಷ್ಣ ವಚನವೇದ’ ಎಂಬುದು ಶ್ರೀರಾಮಕೃಷ್ಣರ ವೈವಿಧ್ಯಮಯ ಆಧ್ಯಾತ್ಮಿಕ ಅನುಭೂತಿಗಳನ್ನು ವಿಶೇಷವಾಗಿ ನಿರೂಪಿಸುವ ಗ್ರಂಥ. ನಾವು ಇಲ್ಲಿ ಏನನ್ನು ಗಮನಿಸಬೇಕೆಂದರೆ, ಅನುಭವ ಪಡೆದವರೇ ಸ್ವತಃ ನೇರವಾಗಿ ತಮ್ಮ ದೈವಾನುಭೂತಿಯನ್ನು ಸರಳ ಭಾಷೆಯಲ್ಲಿ ವಿವರಿಸಿದಂತಹ ಅಪರೂಪದ ಆಧ್ಯಾತ್ಮಿಕ ಅನುಭವದ ನಿಧಿ ಇದಾಗಿದೆ. ಶ್ರೀರಾಮಕೃಷ್ಣರು ತಾವು ಪಡೆದಂತಹ ಆಧ್ಯಾತ್ಮಿಕ ದರ್ಶನ, ಸ್ವಾನುಭವವನ್ನು ತಮ್ಮ ಸ್ಪಷ್ಟ ಅಭಿವ್ಯಕ್ತಿಯಿಂದ ನಮಗೆ ಆಪ್ತವಾಗಿಸುತ್ತಾರೆ. ಬೇರೆಲ್ಲೂ ಇಷ್ಟು ಪ್ರಮಾಣದಲ್ಲಿ ಮತ್ತು ಇಷ್ಟು ಅಧಿಕೃತವಾಗಿ ದೊರೆಯದ, ಆಧ್ಯಾತ್ಮಿಕ ಅನುಭವಾಮೃತವುಳ್ಳ, ಆಧುನಿಕ ಮೇರು ಕೃತಿ ಇದು ಎಂದು ನಾವು ನಿಸ್ಸಂದೇಹವಾಗಿ ಹೇಳಬಹುದು. ಕ್ಲಿಷ್ಟವೆನಿಸುವ ಆಧ್ಯಾತ್ಮಿಕ ವಿಚಾರಗಳು ಮತ್ತು ಧರ್ಮಸೂಕ್ಷ್ಮಗಳನ್ನು ಸಾಮಾನ್ಯ ಜನರ ಬುದ್ಧಿಗೆ ಗ್ರಾಹ್ಯವಾಗುವ ರೀತಿಯಲ್ಲಿ ಈ ಗ್ರಂಥದಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ. ‘ವಚನವೇದ’ಕ್ಕೆ ರಾಷ್ಟ್ರಕವಿ ಕುವೆಂಪುರವರು ಬರೆದ ಮುನ್ನುಡಿಯಲ್ಲಿ ‘‘ಇಷ್ಟು ಸರ್ವಜನ ಸಾಮಾನ್ಯರೂಪದಲ್ಲಿ, ಇಷ್ಟು ಸರ್ವಸುಲಭ ರೂಪದಲ್ಲಿ ಭಗವಂತ ಎಂದೂ ಅವತರಿಸಿರಲಿಲ್ಲ. ಭಗವದ್ವಾಣಿ ತಾನೆಂದೂ ಕೃತಿಗೊಂಡಿರಲಿಲ್ಲ’’ ಎಂದಿದ್ದಾರೆ.

### ಗ್ರಂಥ ಕರ್ತೃ ಮತ್ತು ಕೃತಿಯ ಸನ್ನಿವೇಶಗಳು

ಮಾಸ್ಟರ್ ಮಹಾಶಯರೆಂದು ವಿಖ್ಯಾತರಾದ ಮಹೇಂದ್ರನಾಥ ಗುಪ್ತರು ಪರಮಹಂಸರ ಆಪ್ತ ಶಿಷ್ಯರು. ಸರಸ್ವತೀ ದೇವಿಯ ಮತ್ತು ಪರಮಹಂಸರ ವಿಶೇಷ ಕೃಪೆಗೆ ಪಾತ್ರರಾದವರು. ‘ವಚನವೇದ’ವೆಂಬುದು ಅವರು ದಿನನಿತ್ಯ ಬೇರೆ ಬೇರೆ ಸನ್ನಿವೇಶಗಳಲ್ಲಿ , ಸಮೂಹಗಳಲ್ಲಿ , ಚಲನವಲನಗಳಲ್ಲಿ ಪರಮಹಂಸರ ಸಾಮೀಪ್ಯದಲ್ಲಿದ್ದು ಕೇಳಿದ್ದನ್ನು, ಕೇಳಿದ್ದಂತೆಯೇ ಗ್ರಹಿಸಿ, ಕಂಡದ್ದನ್ನು ಕಂಡಂತೆಯೇ ವಾರ, ದಿನ, ತಾರೀಖು, ಸಂದರ್ಭಗಳನ್ನು ಸ್ಪಷ್ಟೀಕರಿಸಿ, ದೈವವಾಣಿಗೆ ಪ್ರಾಧಾನ್ಯ ಕೊಟ್ಟು ಬರೆದ ವಿನೂತನ ಪ್ರಕಾರದ ಕೃತಿಸಂಗ್ರಹ ಎನ್ನಬಹುದು. ಮಹೇಂದ್ರನಾಥರು ಗ್ರಂಥದ ಉದ್ದಕ್ಕೂ, ಎಲ್ಲಾ ಸಂಭಾಷಣೆಗಳನ್ನು ತಾವೇ ಆಲಿಸಿ, ಗ್ರಹಿಸಿ ದಾಖಲಿಸಿದ್ದರೂ, ತಮ್ಮನ್ನು ಕೇವಲ ‘ಮ’ ಎಂಬ ಸಂಕ್ಷಿಪ್ತ ಏಕಾಕ್ಷರದಿಂದಲೇ ನಾಮಾಂಕಿತರನ್ನಾಗಿಸಿಕೊಂಡು, ತೆರೆಯ ಮರೆಯಲ್ಲಿದ್ದು, ತಮ್ಮ ಅಸ್ತಿತ್ವವನ್ನು ಮರೆಮಾಚಿ, ಪರಮಹಂಸರ ಶ್ರೀಮುಖದಿಂದ ಹೊರಹೊಮ್ಮಿದ ದಿವ್ಯ ಆಧ್ಯಾತ್ಮಿಕ ಜ್ಞಾನಸುಧೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಆದುದರಿಂದ ದೈವಾನುಭೂತಿಯಿಂದ ಕೂಡಿದ ಈ ಅಮೃತಸಿಂಚನವು ಜನಮಾನಸಕ್ಕೆ ಪರಮಹಂಸರು ತಾವೇ ಸ್ವತಃ ನುಡಿದಂತೆ ಇದೆ. ಹೀಗೆ ಅಮೂಲ್ಯವಾದ ಈ ಕೃತಿಯ ರಚನೆಯಲ್ಲಿ, ಆಧ್ಯಾತ್ಮಿಕ ಪ್ರಾಧಾನ್ಯತೆ ಮತ್ತು ಧರ್ಮದೀಪಿಕೆಯ ಐತಿಹಾಸಿಕ ಸತ್ಯವನ್ನು ಮತ್ತು ಅಧಿಕೃತತೆಯನ್ನು ಓದುಗರಿಗೆ ಮನವರಿಕೆಯಾಗುವಂತೆ ಉಳಿಸಿದ್ದಾರೆ. ಯಾವ ರೀತಿಯ ಅನವಶ್ಯಕ ಸಮ್ಮಿಶ್ರಣ, ಊಹೆಗಳಿ

ಮಹೇಂದ್ರನಾಥ ಗುಪ್ತ – 'ಮ', 'ವಚನವೇದ'ದ ಕರ್ತೃ



ಆತ್ಮೀಯ ಒಡನಾಟ, ಅವರು ಕೊಟ್ಟ ವಿಶಿಷ್ಟ ಮಾರ್ಗದರ್ಶನ ಎಲ್ಲವೂ ಅತ್ಯಂತ ನೈಜವಾಗಿ, ಸ್ವಾಭಾವಿಕವಾಗಿ ಈ ಗ್ರಂಥದಲ್ಲಿ ವ್ಯಕ್ತವಾಗಿದೆ. ಈ 'ವಚನವೇದ'ದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜೀವನ ದರ್ಶನವನ್ನು ಇಂದಿನ ಆಧುನಿಕ ವಿಡಿಯೋಗ್ರಾಫಿಗಿಂತ ಪರಿಣಾಮಕಾರಿಯಾಗಿ ಮಾಸ್ಟರ್ ಮಹಾಶಯರು ಬರೆದು ಚಿತ್ರಿಸಿದ್ದಾರೆ. ಶ್ರೀರಾಮಕೃಷ್ಣ ಪರಮಹಂಸರ ಜೀವನ ಮಹಾತ್ಮ್ಯ ಮತ್ತು ಅವರ ಸ್ವರೂಪ ಧ್ಯಾನವನ್ನು ಭಕ್ತರು, ಸಾಧಕರು ಮುಂದಿನ ಸಾವಿರಾರು ವರ್ಷಗಳ ಕಾಲ ಸುಲಭವಾಗಿ ಮಾಡುವಂತೆ ಕಲ್ಪಿಸಿಕೊಡುತ್ತದೆ ಈ ಅಮೂಲ್ಯವಾದ ಶ್ರೀರಾಮಕೃಷ್ಣ ದರ್ಶನ ಗ್ರಂಥ.

## 'ವಚನವೇದ'ದ ವೈಶಿಷ್ಟ್ಯ

ಈ ಜಗತ್ತಿನ ಬಹುಸಂಖ್ಯಾತರ, ಬಹುದೇಶಗಳ ಆಡುಭಾಷೆಯಾದ ಇಂಗ್ಲಿಷ್ ಭಾಷೆಯಲ್ಲಿ ಈ ಕೃತಿ 'The Gospel of Sri Ramakrishna' ಎಂದು ವಿಶ್ವವಿಖ್ಯಾತಗೊಂಡಿದೆ. ಆದುದರಿಂದ ಪ್ರಪಂಚದಾದ್ಯಂತ ಆಧ್ಯಾತ್ಮಿಕ ಪಿಪಾಸುಗಳಿಗೆ ಇದು ಪರಿಣಾಮಕಾರಿ ಮತ್ತು ಪ್ರಾಯೋಗಿಕವಾದ ಸ್ಫೂರ್ತಿದಾಯಕ ಮಾರ್ಗದರ್ಶಿಯಾಗಿದೆ. ಆಧ್ಯಾತ್ಮಿಕ ಬೆಳಕನ್ನು ಕೊಟ್ಟು, ಆಸ್ತಿಕ್ಯ ಭಾವವನ್ನು ವರ್ಧಿಸುವ ಈ 'ಶ್ರೀರಾಮಕೃಷ್ಣ ವಚನವೇದ'ವು ಜಾಗತಿಕ ಧರ್ಮಭಾವನೆಗೆ ಪುನಃಶ್ಚೇತನಕಾರಿಯಾಗಿದೆ. ನಮ್ಮ ದೇಶದ ಎಲ್ಲಾ ಮುಖ್ಯ ಭಾಷೆಗಳಿಗೆ ಹಾಗೂ ಫ್ರೆಂಚ್, ಗ್ರೀಕ್, ಸ್ಪ್ಯಾನಿಷ್, ಜಪಾನೀ, ರಷ್ಯನ್ ಮತ್ತಿತರ ಅನೇಕ ವಿದೇಶೀ ಭಾಷೆಗಳಿಗೂ ಭಾಷಾಂತರಗೊಂಡಿದೆ. ಇಡೀ ಮನುಕುಲಕ್ಕೆ ಆಧ್ಯಾತ್ಮಿಕ ತಾಯಿಬೇರಿನಂತೆ ಆಧುನಿಕ ವೇದವಾಗಿ ರೂಪುಗೊಳ್ಳುತ್ತಿರುವ ಈ ಅಮರಕೃತಿಯು ಆಧ್ಯಾತ್ಮಿಕ ಜ್ಞಾನಶಕ್ತಿಸಂಚಾರದ ಪ್ರಮುಖ ವಾಹಿನಿಯಾಗಿ ಕಾರ್ಯಗೈಯುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ.

ಲ್ಲದೆ ಪಾರದರ್ಶಕವಾಗಿ ಈ ಗ್ರಂಥದ ಮೂಲಕ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳು ಭವಿಷ್ಯದ ಸಾವಿರಾರು ವರ್ಷಗಳಲ್ಲಿ ಮುಂದಿನ ಪೀಳಿಗೆಗೆ ತಲುಪುವಂತಾಗಲಿ ಎಂಬ ಮಾಸ್ಟರ್ ಮಹಾಶಯರ ದೂರದೃಷ್ಟಿ, ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಕೂಡಾ ಇಲ್ಲಿ ನಾವು ಗಮನಿಸಬಹುದು. ಈ ಪವಿತ್ರ ಆಧ್ಯಾತ್ಮಿಕ ಜ್ಞಾನನಿಧಿಯು ಸಾರ್ವಕಾಲಿಕ ಪ್ರಸ್ತುತತೆಯಿಂದಾಗಿ 'ವಚನವೇದ' ಎಂಬ ಯೋಗ್ಯವಾದ ನಾಮಕ್ಕೆ ಪಾತ್ರವಾಗಿದೆ.

ಈ ಕೃತಿಯಲ್ಲಿ ಶ್ರೀರಾಮಕೃಷ್ಣರನ್ನು ಮಾಸ್ಟರ್ ಮಹಾಶಯರು ಹಲವಾರು ಸಂದರ್ಭಗಳಲ್ಲಿ, ಸುಮಾರು ೫ ವರ್ಷಗಳ ಅವಧಿಯಲ್ಲಿ (೧೮೮೨ರ ಫೆಬ್ರವರಿಯಿಂದ ೧೮೮೬ರ ಆಗಸ್ಟ್) ಕಂಡು ಬರೆದ ಪ್ರತ್ಯಕ್ಷ ದಿವ್ಯಜೀವನ ವೃತ್ತಾಂತವಿದೆ. ಈ ಗ್ರಂಥದಲ್ಲಿ ಶ್ರೀರಾಮಕೃಷ್ಣರು ದಕ್ಷಿಣೇಶ್ವರ ಕಾಳಿದೇವಾಲಯದ ಪ್ರಾಂಗಣದಲ್ಲಿರುವ ತಮ್ಮ ಕೊಠಡಿಗೆ ಸತ್ಸಂಗಕ್ಕಾಗಿ ಬಂದ ಭಕ್ತರೊಡನೆ ನಡೆಸಿದ ಸಂಭಾಷಣೆ, ಅವರು ಅನೇಕ ಬಾರಿ ಭಕ್ತರ ಮನೆಗೆ ಭೇಟಿ ನೀಡಿದ ಪ್ರವಾಸ ಕಥನ. ಅಲ್ಲಿ ನೆರೆದಿದ್ದ ಭಕ್ತ ಸಮೂಹವನ್ನು ಉದ್ದೇಶಿಸಿ ಹೇಳಿದ ಮಾತುಗಳು, ಅವರ ಅನಾರೋಗ್ಯದ ಸಮಯದಲ್ಲಿ ಹೇಗೆ ಬಾಳಿದರು ಹಾಗೂ ಅವರ ಸಹಜಜೀವನದ ದಿನಚರಿಯ ವಿವರಣೆಗಳನ್ನು ನಾವು ಕಾಣಬಹುದು. ಒಬ್ಬ ಆಧ್ಯಾತ್ಮಿಕ ಸಾಧಕನಾಗಿ, ಪೂರ್ಣ ಬ್ರಹ್ಮಜ್ಞಾನಿಯಾಗಿ, ಭಕ್ತ ಮತ್ತು ಗುರುವಾಗಿ, ಅಭಿವ್ಯಕ್ತವಾದ ಶ್ರೀರಾಮಕೃಷ್ಣರ ಜೀವನ ಆಗಾಗ್ಗೆ ಸಮಾಧಿಮಗ್ನರಾಗಿದ್ದು, ದೈವೀ ಉನ್ಮಾದದಲ್ಲಿರುವ ಅವರ ದೈವೀಭಾವಗಳ ವಿವರ, ತಮ್ಮ ಅಂತರಂಗ ಶಿಷ್ಯರೊಡನೆ

ಶ್ರೀರಾಮಕೃಷ್ಣರ ಕೊಠಡಿ, ದಕ್ಷಿಣೇಶ್ವರ



ಈ ಆಧ್ಯಾತ್ಮಿಕ ಗ್ರಂಥದ ಮತ್ತೊಂದು ಮುಖ್ಯ ಲಕ್ಷಣವೇನೆಂದರೆ, ಈ ಗ್ರಂಥದ ಉದ್ದಕ್ಕೂ ಕಂಡುಬರುವ ಅಪರೂಪದ ದೈವಾನುಭೂತಿಯ ವಿವರಣೆಗಳು. ಪರಮಹಂಸರು ತಮ್ಮ ವಿವಿಧ ಆಂತರಿಕ ದೈವೀ ಅನುಭವಗಳನ್ನು ಹಾಗೂ ಸೂಕ್ಷ್ಮವಾದ ಆಧ್ಯಾತ್ಮಿಕ ಅನುಸಂಧಾನಗಳನ್ನು ಮನುಷ್ಯನ ಬುದ್ಧಿಗೆ ಅರ್ಥವಾಗುವ ಭಾಷೆಯಲ್ಲಿ ಅನಾವರಣ ಮಾಡಿದ್ದಾರೆ. ಅವು ಅನುಭವಗಮ್ಯ ಎಂಬುದನ್ನು ಅವರು ಮತ್ತೆ ಮತ್ತೆ ಸಾರಿ ಹೇಳುತ್ತಿರುವುದನ್ನು ನಾವು ಗಮನಿಸಬಹುದು. ದೇವರು, ದೇವ ದರ್ಶನ ಅಥವಾ ಆತ್ಮಜ್ಞಾನ ಎಂಬ ಇಂದ್ರಿಯಾತೀತವಾದ, ಹುಟ್ಟು ಸಾವಿಗೆ ಅತೀತವಾದ, ಈ ಸೃಷ್ಟಿಯ ಸಕಲ ಭೂತಗಳಲ್ಲಿ ನಿಹಿತವಾದ ಒಂದು ಶಾಶ್ವತ ಚೈತನ್ಯ ಇದೆಯೆ? ಅಥವಾ ಇಲ್ಲವೆ? ಅದರ ಅನುಭೂತಿ ಸಾಧ್ಯವೆ? ಎಂಬುದು ಮನುಷ್ಯ ಬುದ್ಧಿಯನ್ನು ತಿವಿಯುತ್ತಿರುವ, ಅನೇಕ ಶತಮಾನಗಳಿಂದ ಪ್ರಪಂಚದಾದ್ಯಂತ ಜನ ಮನವನ್ನು ಕಾಡುತ್ತಿರುವ ಒಂದು ಅತಿ ಮುಖ್ಯ ಪ್ರಾಥಮಿಕ ಪ್ರಶ್ನೆ. ಇದಕ್ಕೆ ದೊರೆತ ಉತ್ತರಗಳು ಅನೇಕವಾದರೂ, ಭಗವಂತನ ಅಸ್ತಿತ್ವವನ್ನು ಸ್ಥಾಪಿಸುವ, ವಿವರಿಸುವ ಗ್ರಂಥಗಳು ಹಾಗೂ ಅನುಭಾವಿಗಳು ಕೂಡಾ ಅನೇಕವಿದ್ದರೂ, ಒಂದೇ ಜೀವನದಲ್ಲಿ, ಒಂದೇ ಗ್ರಂಥದಲ್ಲಿ ವಿವಿಧ ಧರ್ಮಗಳ ಸತ್ಯಗಳ ಅನುಭವಗಳ ಸ್ಪಷ್ಟ ನಿರೂಪಣೆಯನ್ನು – ಸಾಮಾನ್ಯರೂ ಸಮರ್ಪಕವಾಗಿ ಗ್ರಹಿಸಬಲ್ಲ ಭಾಷೆಯಲ್ಲಿ – 'ಶ್ರೀರಾಮಕೃಷ್ಣ ವಚನವೇದ'ವೆಂಬ ಈ ಒಂದೇ ಗ್ರಂಥದಲ್ಲಿ ಮಾತ್ರ ಕಾಣಬಹುದು. ಭಗವದನುಭೂತಿಯನ್ನು ಪಡೆಯಲು ಸಾಧನೆ ಮಾಡುವವರಿಗೆ ಪ್ರೇರಣೆ, ಮಾರ್ಗದರ್ಶನ ಮತ್ತು ಭಗವಂತನ ಅಸ್ತಿತ್ವದಲ್ಲಿ ಶ್ರದ್ಧೆಯನ್ನು ಕೊಡುವ ಶಕ್ತಿಯುಳ್ಳ ಒಂದು ವಿಶೇಷ ಗ್ರಂಥವಾಗಿದೆ ಈ 'ವಚನವೇದ'.

ಈ ಗ್ರಂಥದ ಉಗಮ, ಸನ್ನಿವೇಶಗಳು, ಇದರಲ್ಲಿನ ನಿಜ ಜೀವನದ ಪಾತ್ರಗಳು ಮತ್ತು ಗ್ರಂಥದ ಆಧ್ಯಾತ್ಮಿಕ ವೈಶಿಷ್ಟ್ಯ, ಕೃತಿ ವಿನ್ಯಾಸ, ವಿಷಯಗಳ ವಿಭಾಗೀಕರಣ ಮತ್ತು ಪರಿವಿಡಿ, ಓದುಗರಿಗೆ ಅನುಕೂಲವಾಗುವಂತೆ ಬರೆಯಲಾಗಿದೆ. ಎಲ್ಲಕ್ಕೂ ಮಿಗಿಲಾಗಿ ಧರ್ಮ ಸೂಕ್ಷ್ಮಗಳ ಸತ್ಯತೆಯ ಸುಲಭ ಶಬ್ದರೂಪಗಳು, ದೈವಾನುಭವಗಳ, ತತ್ತ್ವಾರ್ಥಗಳ ಸರಳ ವಿವರಣೆ ಮತ್ತೆಲ್ಲಿಯೂ ಇಷ್ಟು ಅಧಿಕೃತವಾಗಿ ದೊರೆಯುವುದು ಕಷ್ಟ.

ಇದನ್ನೇ ಕುವೆಂಪು ಅವರು 'ದೈವವಾಣಿ' (The word of God) ಎಂದು ಕರೆದು, ಇಂತಹ ಅಧಿಕೃತವಾದ ದೈವವಾಣಿಯುಳ್ಳ ಮತ್ತಾವ ಕೃತಿಯೂ ಹೊರಬಂದಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಇತರ ಆಧ್ಯಾತ್ಮಿಕ ಕೃತಿಗಳಂತೆ ಗದ್ಯಮಾತ್ರವಲ್ಲ, ಗದ್ಯ-ಪದ್ಯ ಹಾಗೂ ಸಂಭಾಷಣೆಗಳ ಸಂಗಮ. ಪರಮಹಂಸರ ದೈವೀಜೀವನವನ್ನು ಮತ್ತು ಇಹಲೋಕದಲ್ಲಿ ಕಾಣಲಸದಳವಾದ ವಿವಿಧ ದೈವೀಭಾವಗಳನ್ನು ಸ್ಪಷ್ಟವಾಗಿ ಬಿಂಬಿಸುವ ಚಿತ್ರಣ ಇಲ್ಲಿದೆ. ದೈವೀಪರಂಧಾಮಕ್ಕೆ ಓದುಗರ ಮನಸ್ಸನ್ನು ಕೊಂಡೊಯ್ಯುವ ಗ್ರಂಥವಿದು. ಸ್ವತಃ ಪರಮಹಂಸರೇ ಭಕ್ತರೊಡಗೂಡಿ ಹಾಡುತ್ತಾ, ದೈವೋನ್ಮಾದದಲ್ಲಿ ನಲಿಯುತ್ತಿರುವ ಭಕ್ತಿಸುಧೆಯ ದೃಶ್ಯಗಳನ್ನು ಇಲ್ಲಿ ನಾವು ಕಾಣಬಹುದು.

### 'ವಚನವೇದ'ದ ವಾಚನವೇ ಒಂದು ಆಧ್ಯಾತ್ಮಿಕ ಸಾಧನೆ

ಶ್ರೀರಾಮಕೃಷ್ಣ ವಚನವೇದದ ನಿತ್ಯ ಅಧ್ಯಯನ ತನ್ಮೂಲಕ ಪರಮಹಂಸರ ದೈವೀಜೀವನದ ಅನುಸಂಧಾನವೇ ಒಂದು ಪರಿಣಾಮಕಾರಿ ಆಧ್ಯಾತ್ಮಿಕ ಸಾಧನೆ. 'ಶ್ರೀರಾಮಕೃಷ್ಣ ವಚನವೇದ'ವನ್ನು ಪ್ರತಿದಿನ ಓದಿದರೆ ಅದು ನಮ್ಮ ಮನಸ್ಸನ್ನು ದೈವೀ ಚಿಂತನೆಯಲ್ಲಿ ತಲ್ಲೀನಗೊಳಿಸುತ್ತದೆ. ಇದು ನೇರವಾಗಿ ಭಗವತ್ ಸಂಪರ್ಕವನ್ನು ನಮಗೆ ಕಲ್ಪಿಸಿಕೊಡುತ್ತದೆ. ಈ ದೈವವಾಣಿಯನ್ನು ನಿತ್ಯ ಮನನ ಮಾಡುವುದರಿಂದ ನಮ್ಮ ಮನಸ್ಸು ಮತ್ತು ಬುದ್ಧಿ ಭಗವತ್ ಕೇಂದ್ರಿತವಾಗುತ್ತದೆ. ವಚನವೇದದಲ್ಲಿ ಶ್ರೀರಾಮಕೃಷ್ಣರ ವಾಣಿಯು, ವಿವೇಕವನ್ನು ಜಾಗೃತಗೊಳಿಸಿ ಭಗವಂತ ಮಾತ್ರ ಸತ್ಯ, ಉಳಿದುದೆಲ್ಲವೂ ಅವನ ಲೀಲೆ; ಈ ಲೀಲಾ ಪ್ರಪಂಚದಲ್ಲಿ ವಿವೇಕ, ಜ್ಞಾನ ಮತ್ತು ಭಕ್ತಿಯಿಂದ ಒಡಗೂಡಿ ಕರ್ತವ್ಯವನ್ನು ನಿರ್ವಹಿಸುತ್ತಾ, ನಾವು ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂಬುದನ್ನು ಗೃಹಸ್ಥರಿಗೂ ಹಾಗೂ ಇತರ ಸಾಧಕರಿಗೂ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತದೆ.

### ಭಗವಂತ – ಸತ್ಯ ಮತ್ತು ಅನುಭವಗಮ್ಯ

ವಚನವೇದದಲ್ಲಿ ಕಂಡುಬರುವ ಶ್ರೀರಾಮಕೃಷ್ಣ ಪರಮಹಂಸರ ಈ ಕೆಳಗಿನ ದೈವಾನುಭವಾಧಾರಿತ ಮಾತುಗಳನ್ನು ಗಮನಿಸೋಣ:

**ಶ್ರೀರಾಮಕೃಷ್ಣರು :** ''ಭಕ್ತರಿಗೆ ಸಗುಣಬ್ರಹ್ಮ. ಎಂದರೆ ಭಕ್ತ ನಂಬುತ್ತಾನೆ, ಭಗವಂತ ಸಗುಣ, ಆತ ತನಗಾಗಿ ರೂಪವನ್ನು ಧರಿಸಿ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ ಎಂಬುದಾಗಿ. ನಮ್ಮ ಪ್ರಾರ್ಥನೆ ಕೇಳತಕ್ಕವನು ಆತನೇ. ನೀವು ಪ್ರಾರ್ಥನೆ ಮಾಡುತ್ತೀರಲ್ಲ, ಅದೂ ಆತನನ್ನು ಉದ್ದೇಶಿಸಿಯೇ. ಭಗವಂತ ಒಬ್ಬ ವ್ಯಕ್ತಿ, ಆತ ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ, ಸೃಷ್ಟಿಸ್ಥಿತಿ ಪ್ರಳಯ ಮಾಡುತ್ತಾನೆ, ಆತನಿಗೆ ಅನಂತ ಶಕ್ತಿ ಇದೆ ಎಂಬ ಭಾವನೆ ಇದ್ದುಬಿಟ್ಟರೆ ಅದೇ ಯಥೇಷ್ಟ.''

''ಭಕ್ತಿಮಾರ್ಗದಿಂದ ಆತನನ್ನು ಸುಲಭವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು.''

**ಒಬ್ಬ ಬ್ರಾಹ್ಮ ಭಕ್ತ:** ''ಭಗವಂತನನ್ನು ನೋಡಲು ಸಾಧ್ಯವೆ? ಸಾಧ್ಯವಿದ್ದರೆ ನನ್ನಿಂದೇಕೆ ಆತನನ್ನು ನೋಡಲಾಗುತ್ತಿಲ್ಲ?''

**ಶ್ರೀರಾಮಕೃಷ್ಣರು:** ''ಸಾಧ್ಯ, ನಿಸ್ಸಂದೇಹವಾಗಿಯೂ ಆತನನ್ನು ನೋಡಬಹುದು. ಆತನ ಸಾಕಾರರೂಪವನ್ನು ನೋಡಬಹುದು, ಆತನ ಅರೂಪವನ್ನೂ ನೋಡಬಹುದು. ಅದನ್ನು ನಾನು ನಿನಗೆ ಹೇಗೆ ವಿವರಿಸಲಿ?''

**ಬ್ರಾಹ್ಮ ಭಕ್ತ:** ''ಏನು ಮಾಡಿದರೆ ಆತನ ದರ್ಶನವನ್ನು ಪಡೆದುಕೊಳ್ಳಬಹುದು?''

**ಶ್ರೀರಾಮಕೃಷ್ಣರು:** ''ವ್ಯಾಕುಲನಾಗಿ ಆತನ ದರ್ಶನಕ್ಕಾಗಿ ಅಳಬಲ್ಲೆಯಾ? ಜನ ಮಕ್ಕಳಿಗಾಗಿ, ಹೆಂಡತಿಗಾಗಿ, ಹಣಕ್ಕಾಗಿ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ. ಆದರೆ ಭಗವಂತನಿಗಾಗಿ ಯಾರು ಅಳುತ್ತಾರೆ?..'' *(ಭಾಗ-೧, ಪುಟ ೧೦೧)*

### ಬಾಳನ್ನು ನಿತ್ಯ ಬೆಳಗುವ ಅಧ್ಯಾತ್ಮ ಸೂರ್ಯ

ಈ ಕೃತಿಯಲ್ಲಿ ಪರಮಹಂಸರ ಮತ್ತು ನರೇಂದ್ರ (ಸ್ವಾಮಿ ವಿವೇಕಾನಂದ) ಮುಂತಾದ ಅವರ ಶಿಷ್ಯರು ಹಾಗೂ ಭಕ್ತರ ನಡುವೆ ನಡೆದ ಸಂವಾದಗಳ ಸಹಜ ಚಿತ್ರಣವಿದೆ. ಅವರು ವಿವಿಧ ಭಕ್ತರೊಡನೆ, ಆಗುಂತಕರೊಡನೆ ಮಾತನಾಡುತ್ತಿದ್ದ ರೀತಿ, ಅವರ ದಿನಚರಿಯ ಪಕ್ಷಿನೋಟ, ಅವರ ದೈವೀಭಾವಗಳ ವಿವರಣೆ ಮನಮುಟ್ಟುವಂತೆ ದಾಖಲಿಸಲಾಗಿದೆ. ಗಿರೀಶ್ ಚಂದ್ರ ಘೋಷ್, ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ ಚಟರ್ಜಿ, ಕೇಶವ ಚಂದ್ರ ಸೇನ ಮುಂತಾದ ಪ್ರಸಿದ್ಧ ವ್ಯಕ್ತಿಗಳೊಡನೆ ಶ್ರೀರಾಮ ಕೃಷ್ಣರ ಸಂಭಾಷಣೆ ಸ್ವಾರಸ್ಯಕರವಾಗಿದೆ. ಗೌರೀಪಂಡಿತ, ವೈಷ್ಣವ ಚರಣ, ಶಶಧರ ತರ್ಕಚೂಡಾಮಣಿ ಮುಂತಾದ ಆಧ್ಯಾತ್ಮಿಕ ಹಾಗೂ ಧರ್ಮಸೂಕ್ಷ್ಮಗಳ ಬಗ್ಗೆ ಪಂಡಿತರೊಡನೆ ನಡೆಸಿದ ಸಂವಾದ ನಮ್ಮ ಕಣ್ಣು ತೆರೆಸುವಂತಿದೆ. ದಿನ ನಿತ್ಯದ ಘಟನೆಗಳಲ್ಲಿ ಅವರ ಸರಳ, ಪಾರದರ್ಶಕ ಜೀವನಶೈಲಿ ನಮಗೆ ಮುದ ನೀಡು ವಂತಿದೆ. ಅವರ ಜೀವನದಲ್ಲಿ ದೈವೀಭಾವ, ಗುರುಭಾವ, ಸಹಜ ಭಾವಗಳು ದಿವ್ಯಲೀಲೆಯಾಗಿ ಅಭಿವ್ಯಕ್ತಗೊಂಡದ್ದನ್ನು ಕಂಡು, ಭಾವಿಸಿ ಪುನೀತರಾಗುತ್ತೇವೆ. ಧನ್ಯರಾಗುತ್ತೇವೆ. ಇದು ದೈವಶ್ರದ್ಧೆ ಯನ್ನು ಮನುಕುಲದಲ್ಲಿ ಉದ್ದೀಪನಗೊಳಿಸುವ ಒಂದು ಅಮೂಲ್ಯ ಕೃತಿ ಹಾಗೂ ದೈವೀ ಅಸ್ತಿತ್ವದ ಪ್ರಬಲ ಸಾಕ್ಷಿ. ಸನಾತನ ಧರ್ಮ ಸೂಕ್ಷ್ಮಗಳ ಅನುಭವಗಳಿಗೆ ಆತ್ಯಂತಿಕ ಆಧಾರ; ಮತ್ತು ಸರ್ವ ಧರ್ಮಗಳ ಆಧ್ಯಾತ್ಮಿಕ ಸಾರದ ನಿಧಿ ಈ ಒಂದು ಮಹಾನ್ ಗ್ರಂಥದಲ್ಲಿ ಅಡಕವಾಗಿದೆ.

ಆದುದರಿಂದ ಇದು ಓದಿ ಮುಗಿಸುವ ಪುಸ್ತಕವಲ್ಲ. ಪೂಜೆ, ಅರ್ಚನೆಗಳಂತೆ, ನಿತ್ಯ ಸ್ವಾಧ್ಯಾಯಗಳಂತೆ, ದೈವ ಸನ್ನಿಧಿಗೆ ನಮ್ಮ ಹೃನ್ಮನಗಳನ್ನು ಕರೆದುಕೊಂಡು ಹೋಗುವ, ಬಾಳನ್ನು ನಿತ್ಯ ಬೆಳ ಗುವ ಅಧ್ಯಾತ್ಮ ಸೂರ್ಯ ಎನ್ನಬಹುದು.

### ಕುವೆಂಪುರವರ ದೃಷ್ಟಿಯಲ್ಲಿ 'ವಚನವೇದ'

ಈ ವಚನವೇದದ ಮಾಹಾತ್ಮ್ಯವನ್ನು ಕುವೆಂಪುರವರು ತಾವು ಬರೆದ ಮುನ್ನುಡಿಯಲ್ಲಿ ಈ ರೀತಿ ಅತ್ಯದ್ಭುತವಾಗಿ ವರ್ಣಿಸಿ ದ್ದಾರೆ. ಅದನ್ನು ಇಲ್ಲಿ ಉಲ್ಲೇಖಿಸಿ ಓದುಗರ ಗಮನಕ್ಕೆ ತರು ವುದು ಸೂಕ್ತವೆನಿಸುತ್ತದೆ:

''ಶ್ರೀರಾಮಕೃಷ್ಣ ವಚನವೇದವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ. ಆದರೆ ದೇವಸ್ಥಾನ ಪುಣ್ಯಕ್ಷೇತ್ರಗಳಂತೆ ತಾನೆಂದಿಗೂ ಕಲುಷಿತವಾಗುವ ಸಂಭವವಿಲ್ಲ , ಶಿಥಿಲವಾಗುವ ಸಂಭವವಿಲ್ಲ. ಯಾವ ಮನೆ ಯಲ್ಲಿ ಈ ವಚನವೇದ ಇರುತ್ತದೆಯೊ ಅದು ಮಂದಿರವಾಗು ತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೇ ಧರಿಸಿರುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೆ ಈಂಟುತ್ತಿರುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ; ದಿವ್ಯಜ್ಞಾನದ ಓಗರ; ಕಷ್ಟದ ಸಮಯದಲ್ಲಿ ಧೈರ್ಯವೀಯುವ ಸಖ; ಸುಖದ ಸಮಯದಲ್ಲಿ ಸಮರ್ಪಣ ಭಾವವಿತ್ತು , ವಿನಯ ಭಕ್ತಿಗಳನ್ನು ಪ್ರಚೋದಿಸುವ ಗುರು; ಕತ್ತಲಲ್ಲಿ ದೀಪ; ದಾರಿಗೆ ಊರುಗೋಲು, ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ. ಇಲ್ಲಿ ವೇದ ವೇದಾಂತ ದರ್ಶನಾದಿ ಸರ್ವಸಾರವಿದೆ. ಓದು ಬರಹ ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತ ನಿಗೂ ಕರುಬುವ ಆವಶ್ಯಕತೆಯಿಲ್ಲ ; ಯಾವ ವಿದ್ವತ್‌ಪೂರ್ಣ ವಾದ ತತ್ತ್ವಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ... ನಮ್ಮ ರಾಜಕೀಯ ರಾಜ್ಯಾಂಗಕ್ಕೆ ಪೂರಕವಾಗುವ ಧಾರ್ಮಿಕ ರಾಜ್ಯಾಂಗ ವಾಗುತ್ತದೆ ಈ 'ಶ್ರೀರಾಮಕೃಷ್ಣ ವಚನವೇದ!' '' ಎಂದಿರು ವುದು ಇದರ ಅಪರೂಪದ, ಐತಿಹಾಸಿಕವಾದ ಆಧ್ಯಾತ್ಮಿಕ ಮತ್ತು ಧಾರ್ಮಿಕ ವೈಶಿಷ್ಟ್ಯವನ್ನು ಸೂಚಿಸುತ್ತದೆ.

### ಎಲ್ಲರನ್ನೂ ಸಲಹುವ ಆಧ್ಯಾತ್ಮಿಕ ಮಾರ್ಗದರ್ಶಿ

ವಿಶ್ವದ ಎಲ್ಲಾ ಧರ್ಮಗಳ ಆಸ್ತಿಕ್ಯಭಾವಗಳನ್ನು ಪ್ರಶ್ನಿಸುವ ನಾಸ್ತಿಕ ಶಕ್ತಿ, ಜಡವಾದದ ಪರಂಪರೆ ಮತ್ತು ಸೆಕ್ಯೂಲರ್ ಎಂಬ ರಾಜ್ಯಾಂಗಗಳು ಉದಯಿಸಿದ ಈ ಆಧುನಿಕ ಕಾಲದಲ್ಲಿ 'ಶ್ರೀ ರಾಮಕೃಷ್ಣ ವಚನವೇದ' ಒಂದು ಪ್ರಬಲ ಆಸ್ತಿಕ ಶಕ್ತಿ. ಜಗತ್ತಿನ ಎಲ್ಲಾ ಧರ್ಮಗಳು ಈ ವೈಜ್ಞಾನಿಕ ಯುಗದಲ್ಲಿ , ಜಡವಾದದ ಬೆಂಕಿಯಿಂದ ನಶಿಸುತ್ತಿರುವ ಸಂದರ್ಭದಲ್ಲಿ , ಶ್ರೀರಾಮಕೃಷ್ಣ ವಚನವೇದ, ವೇದಾಂತ ತತ್ತ್ವವನ್ನು ಸ್ಪಷ್ಟವಾದ ಅನುಭವದ ಭಾಷೆಯಲ್ಲಿ ವಿವರಿಸುವುದಲ್ಲದೆ, ಪೂಜೆ, ವ್ರತ ಮತ್ತು ಜಪ ತಪಾದಿ ಧಾರ್ಮಿಕ ವಿಧಿವಿಧಾನಗಳ ಗೂಢಾರ್ಥಗಳನ್ನು ಸ್ಪಷ್ಟೀ ಕರಿಸುತ್ತದೆ. ವಿವಿಧ ದೈವೀಸ್ವರೂಪಗಳ, ಭಕ್ತಿಸಾಧನದ ಅನು ಭೂತಿಗಳ ಬಗ್ಗೆ ಇರುವ ಸಂಶಯಗಳನ್ನೂ ಗೊಂದಲಗಳನ್ನೂ ನಿವಾರಿಸುತ್ತದೆ. ಆಧ್ಯಾತ್ಮಿಕ ಸಂಶೋಧನೆಯ ಮತ್ತು ಸಾಧಕನ ಮನೋವಿಕಾಸದ ವಿವಿಧ ಹಂತಗಳನ್ನು ಅರ್ಥಪೂರ್ಣವಾಗಿ ಈ ಗ್ರಂಥ ಪರಿಚಯಿಸುತ್ತದೆ. ಗೃಹಸ್ಥರಿಗೂ, ವಿವಿಧ ಪಥದಲ್ಲಿರುವ ಸಾಧಕರಿಗೂ, ವಿರಕ್ತರಿಗೂ ಮತ್ತು ಸಂನ್ಯಾಸಿಗಳಿಗೂ ತಾರತಮ್ಯ ವಿಲ್ಲದೆ ದೈವಾನ್ವೇಷಣೆಗೆ ಪ್ರೇರಣೆ ನೀಡುವ, ಎಲ್ಲರನ್ನೂ ಸಲಹುವ ಮಾತೃಸ್ವರೂಪದ ಮತ್ತು ಗುರುಸ್ವರೂಪದ ಆಧುನಿಕ ಆಧ್ಯಾತ್ಮಿಕ ಮಾರ್ಗದರ್ಶಿ **'ಶ್ರೀರಾಮಕೃಷ್ಣ ವಚನವೇದ.'** ✽